ಆ ಓದು, ಬಾಯಿಪಾಠ ಮಾಡಿದ ಹಾಗಿನ ಆ ಮಾತುಗಳೊಂದಿಗೆ ತೊಗಲುಗೊಂಬೆಯ ಪ್ರದರ್ಶಕಗುಣ ಹೊತ್ತು ನಿಂತಿರುತ್ತಿದ್ದಳು.

ಚಹಾ ತರುವುದಕ್ಕೂ ಮೊದಲೊಂದು ಸಲ ಬಾಗಿಲ ಸಂದಿಯಿಂದಲೇ ಹಣಿಕಿದಳು. ಹಲ್ಲುಗಿಂಜುತ್ತ ಸೋಫಾದ ತುತ್ತತುದಿಯಲ್ಲಿ, ತುದಿಗುಂಡಿಯಲ್ಲಿ ಕುಳಿತಿದ್ದವನ ಕಾಲುಗಳು ಒಂದೇ ಸವನೇ ಕುಣಿಯುತ್ತಿದ್ದವು. ಎದೆಯ ಮೇಲಿನ ಒಂದು ಬಟನ್ ಬಿಚ್ಚಿಕೊಂಡು ಆಗಷ್ಟೆ ಖರೀದಿಸಿ ತಂದಿದ್ದ ಅಚ್ಚಬಿಳಿಯ ಕರವಸ್ತ್ರದಲ್ಲಿ ಗಾಳಿ ಹಾಕಿಕೊಳ್ಳುತ್ತಾ… ನಾಗೊಂದಿಗೆ ಹೊಂದಿಸಿ ಸಾಲಾಗಿ ಜೋಡಿಸಿದ್ದ ಅಣ್ಣ ಬಸವಣ್ಣ, ಅಕ್ಕ, ಚನ್ನಬಸವಣ್ಣ, ಅಪ್ಪಣ್ಣ, ಗೊಡಚಿ ವೀರಭದ್ರ, ಯಮನೂರು ದರ್ಗಾದ ರಾಜಾಭಾಗ್, ಹಾಗೂ ಗುಡ್ಡದ ಎಲ್ಲವ್ವನ ಪವಾಡ ಸದೃಶ್ಯಗಳ ಚಿತ್ರವಿರುವ ಫೋಟೊಗಳನ್ನು ನೋಡುತ್ತಿದ್ದ. ಮುಂದಲೆ ಬೋಳಾದಂತೆ ತಲೆಯ ಮೇಲಿನ ಕೂದಲನ್ನು ಮುಂದಕ್ಕೆ ಬಾಚಿಕೊಂಡು, ಕಿವಿಯ ಸುತ್ತಲಿನ ಕೂದಲನ್ನು ಏರುಕ್ರಾಪು ಹೊಡೆದು, ನೆತ್ತಿಯ ಬೋಳುಗುಡ್ಡವನ್ನು ಮುಚ್ಚಲು ಹರಸಾಹಸ ಮಾಡಿರುವುದು ಸ್ಪಷ್ಟವಾಗಿತ್ತು. ಗುಂಡು ಮುಖ, ಏರು ಹಣೆ, ಮೊಂಡು ಮೂಗು, ನಕ್ಕಾಗೊಮ್ಮೆ ಗುಟಕಾದ ಕಪ್ಪಿಡಿದ ಹಲ್ಲುಗಳು ತುಟಿಯನ್ನ ಒಸರಿಕೊಂಡು ಹೊರಬರುತ್ತಿದ್ದರೂ ಅವನ್ನು ಯಾಂತ್ರಿಕವಾಗಿ ಮುಚ್ಚಿಕೊಳ್ಳುತ್ತ ಮುಜುಗರದ ಮುದ್ದೆಯಾಗಿ ಒಮ್ಮೊಮ್ಮೆ ಸೋಫಾದ ಮೂಲೆಗೆ ಹೋಗಿ ಮತ್ತೊಮ್ಮೆ ತುದಿಗುಂಡಿಗೆ ಬರುತ್ತಲಿದ್ದ. ಅವನ ಕಣ್ಣುಗಳು ಆಳದ ಗಾಯದಂತೆ ಕೆಂಪಡರಿದ್ದವು.

ಮಕ್ಕಳ ಟೀವಿಯಲ್ಲಿ ಬರುವ ಅನ್ಯಗ್ರಹದ ಜೀವಿಯ ಆಕಾರದಲ್ಲಿ ಕುಗ್ಗಿದ್ದ ಅವನ ಚಲನವಲನಗಳ ಮೇಲೆ ನಿಗಾ ಇಟ್ಟು ಬಾಗಿದ್ದವಳ ಕುಂಡಿಗೆ ತಾಯಿ ಹಗೂರಾಗಿ ಏಟೊಂದನ್ನು ಕೊಟ್ಟಳು. ಅವಲಕ್ಕಿ ಬಾಳೆಹಣ್ಣು ಕೈಗಿಟ್ಟು ಕೊಟ್ಟುಬರಲು ಸೂಚಿಸಿದಳು. ಮುಂದಿನದೆಲ್ಲವನ್ನೂ ಊಹಿಸಿಕೊಳ್ಳಬಹುದಾದರೆ ಆಕೆಗೆ ಮತ್ತೇನೂ ಹೊಸತೆನಿಸಲಿಲ್ಲ. ಉಡಿತುಂಬಿ ಮಡಲಿಗೆ ಬಾಳೆ ಹಣ್ಣಿಟ್ಟು, ಎಣ್ಣೆ, ಅರಿಸಿನ, ಕುಂಕುಮಾದಿಗಳನ್ನು ಹಚ್ಚಿ, ಹೆಸರು ಕೇಳಿದರು. ಸೀರೆಯನ್ನ ಮೊಣಕಾಲು ಗಂಟಿನವರೆಗೆ ಎತ್ತಿ ಹಿಡಿದಾಗ ಪಾದದ ಬೆರಳುಗಳನ್ನು ನೋಡಿದರು. ಐದ್ಹೆಜ್ಜೆ ನಡೆದಾದ ಮೇಲೆ ಓದಿದ್ದೆಷ್ಟು ಕೇಳಿ ಒಳಗೆ ಹೋಗಲು ಸಮ್ಮತಿಸಿದರು. ಆಮೇಲೆ ಅದದೇ ಹಳೆಯ ಸಂಬಂಧಗಳ ಹುಡುಕಾಟ. ಎಲ್ಲೋ ಸೇರಿ ಇನ್ನೆಲ್ಲೋ ಹರಿದೊಗೆದ ಕಾಲ್ತೊಡಕಿನ ಕುಲವನ್ನು ಶೋಧಿಸಿ ನಿಟ್ಟುಸಿರೊಂದು ಜೊತೆಮಾಡಿ 'ಹತ್ತಗಡೀದ ಸಂಬಂಧ ಐತೆಳ' ಅಂತ ನೆಮ್ಮದಿಗೊಂಡಿದ್ದರು ಅವಳ ಮನೆಯವರು.

ಅವರು ಹೋಗುತ್ತಿದ್ದಂತೆ ಬರಿದಾದ ಆಕೆಯ ಮನಸ್ಸು ಮತ್ತೇನನ್ನೋ ತುಂಬಿಕೊಳ್ಳುತ್ತಲಿತ್ತು. ಕನ್ಯಾ ನೋಡಲಿಕ್ಕೆ ಧಾರವಾಡದಿಂದ ಹುಡುಗನ ಕಡೆಯವರು ಬಂದು ಹಣ್ಣಿಟ್ಟು ಹೋದ ಸುದ್ದಿ ಹೇಗ ಹೇಗೋ ಶೈಲಾಳ ಕಿವಿಗೆ ಬಿದ್ದು ಆಕೆ ಸಂಜಿಮುಂದ ಗೆಳತಿ ಕಾಣಲಿಕ್ಕ ಬಂದಳು. ಹುಡುಗನ ಬಗ್ಗೆ ಕೇಳಿ ಗಾಬರಿಗೊಂಡು, 'ಅಯ್ಯ ಅವನಾ!… ಅಂವಾ ನನಗೂಡ ಓದ್ಯಾನ, ಅವನ ಬಗ್ಗೆ ನಿನಗೇನು ಗೊತ್ತು' ಶಾರದಾಳನ್ನ ಹಿಂದಲ ಬಾವಿಕಟ್ಟೆಗೆ ಕರೆದುಕೊಂಡು ಹೋಗಿ ಸಾದ್ಯಂತ ವರಮಹಾಶಯನ ಪರಾಕ್ರಮದ ವಿವರಗಳನ್ನು ನೀಡಿದ್ದಳು.

ಅಂದೇ ಕಟ್ಟಿಕೊಳ್ಳಲು ತೊಡಗಿ ಅಂದೇ ಛಿದ್ರಗೊಳಿಸಿದ ಆ ಕಟ್ಟಡಕ್ಕೆ ಅಡಿಗಲ್ಲು ಮುಕ್ಕಾಗಿ ಮನಸ್ಸು ಒಡೆದು ತನಗೆ ತಾನೇ ತಾನೊಂದು ಮೂರ್ಖಗೊಂಬೆ ಎಂಬ ಭಾವನೆ ಆಕೆಯನ್ನು ಆವರಿಸಿಕೊಳ್ಳತೊಡಗಿತ್ತು. ಈ ಹಾಳು ಮದುವೆಗಳೇ ಇರಬಾರದಿತ್ತು. ನಾಳೆ